O/C

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕಾ.ನಿ.ಅ/ಕಾ.ಪೇ.ಉ.ವಿ/ಬೆಂ/ಸ.ಅ.ವಾ.120
ವಾರ್ಡ್ ಸಮಿತಿ ಸಭೆ/ಸಂಖ್ಯೆ/421/2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ: 19/11/2021

**ವಿಷಯ:-** ವಾರ್ಡ್ ಸಂಖ್ಯೆ. 120ರ, ನವೆಂಬರ್ ಮಾಹೆಯ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ. 24.11.2021ರಂದು ಬೆಳಿಗ್ಗೆ 11.00 ಗಂಟೆಗೆ ನಿಗಧಿಪಡಿಸಿರುವ ಕುರಿತು.

**ಉಲ್ಲೇಖ:-** ಆಯುಕ್ತರ ಕಛೇರಿ ಆದೇಶ ಸಂಖ್ಯೆ. ಬಿ12(5)ಪಿ.ಆರ್/35/2020/21, ದಿ.21.09.2020

**************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ. 120ರ ವಾರ್ಡ್ ಸಮಿತಿಯ ಸಭೆಯನ್ನು ನವೆಂಬರ್ 2021ರ ಮಾಹೆಯ ದಿನಾಂಕ. 24.11.2021ರಂದು ಬೆಳಿಗ್ಗೆ 11.00 ನಡೆಸಲು ತೀರ್ಮಾನಿಸಲಾಗಿರುತ್ತದೆ.

ಮುಂದುವರೆದು, ಸದರಿ ದಿನದಂದು ವಾರ್ಡ್‌ನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಹಾಗೂ ತೀರ್ಮಾನಿಸಲು, ವಾರ್ಡ್ ಕಮಿಟಿಯ ಎಲ್ಲಾ ಸದಸ್ಯರಿಗೂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಯವರು, ಬೆಸ್ಕಾಂ ಅಧಿಕಾರಿಯವರು, ಸಹ ಕಂದಾಯ ಅಧಿಕಾರಿಯವರು ಹಾಗೂ ವಾರ್ಡಿನ ಪ್ರದೇಶದಲ್ಲಿನ ಸ್ಥಳೀಯ ನಾಗರೀಕ ಕಲ್ಯಾಣ ಸಂಘಗಳ ರವರಿಗೂ ಸಭೆಗೆ ಹಾಜರಾಗುವಂತೆ ಈ ಮೂಲಕ ಕೋರಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ್ಥಳ:-

1. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಾಟನ್‌ಪೇಟೆ ಉಪವಿಭಾಗ ಕಛೇರಿ, ಮಾಗಡಿ ರಸ್ತೆ, 4ನೇ ಕ್ರಾಸ್, ಬಿಬಿಎಂಪಿ ಸಂಕೀರ್ಣ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕಾ.ನಿ.ಅ/ಕಾ.ಪೇ.ಉ.ವಿ/ಬೆಂ/ಪ್ರ.ದ.ಸ/
ಸಭೆಯ ನಡವಳಿ/ಸಂಖ್ಯೆ.42/2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ : 24/11/2021

**ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ವಿಷಯ:-** ದಿನಾಂಕ. 24.11.2021ರಂದು ನಡೆದ ವಾರ್ಡ್ ಸಂಖ್ಯೆ. 120ರ ಸಮಿತಿ ಸಭೆಯ ನಡವಳಿಗಳು.

**ಉಲ್ಲೇಖ:-** ಆಯುಕ್ತರ ಕಛೇರಿ ಆದೇಶ ಸಂಖ್ಯೆ. ಬಿ12(5)ಪಿ.ಆರ್/35/2020/21, ದಿ. 21.09.2020.

1. ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಮುನಿಲಕ್ಷ್ಮಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಇತರೆ ಸದಸ್ಯರು ಮತ್ತು ಕಾರ್ಯದರ್ಶಿಯವರ ಸಮ್ಮುಖದಲ್ಲಿ ಪ್ರಾರಂಭಿಸಲಾಯಿತು.
2. ಸದರಿ ವಾರ್ಡಿನಲ್ಲಿ ವಿದ್ಯುತ್ ದೀಪಗಳನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚಿಸಲಾಯಿತು.
3. ವಾರ್ಡ್ ಪ್ರದೇಶದಲ್ಲಿ ರಸ್ತೆ ಗುಂಡಿಗಳನ್ನು ಶೀಘ್ರವಾಗಿ ಮುಚ್ಚಲು ಸೂಕ್ತ ಕ್ರಮವಹಿಸಲು ಸೂಚಿಸಿರುತ್ತಾರೆ.
4. ಕಟ್ಟಡದ ತ್ಯಾಜ್ಯ ವಸ್ತುಗಳ ಸಂಗ್ರಹವಿದ್ದು, ಶೀಘ್ರವಾಗಿ ಟ್ರಾಕ್ಟರ್‌ಗಳ ಮುಳಕ ಹೊರಹಾಕಲು ಕ್ರಮ ವಹಿಸಲು ತಿಳಿಸಿರುತ್ತಾರೆ.
5. ಕಾಟನ್‌ಪೇಟೆ ಮುಖ್ಯರಸ್ತೆಯಲ್ಲಿ ಟೆಂಡರ್ ಶ್ಯೂರ್ ವತಿಯಿಂದ ರಸ್ತೆ ಕಾಂಕ್ರಿಟ್ ಹಾಕಿದ್ದು ಕಲ್ವರ್ಟ್‌ಗಳನ್ನು ಹಾಕಿರುವುದರಿಂದ ಕ್ರಾಸ್ ರಸ್ತೆಗಳಲ್ಲಿ ನೀರು ನಿಲ್ಲುವುದನ್ನು ತಪ್ಪಿಸಬಹುದಾಗಿರುತ್ತದೆ ಎಂದು ಚರ್ಚಿಸಲಾಯಿತು ಅದರಂತೆ ಕ್ರಮ ವಹಿಸಲು ತಿಳಿಸಿರುತ್ತಾರೆ.
6. ಆರೋಗ್ಯ ಇಲಾಖೆಯವರಿಗೆ ಸೊಳ್ಳೆ ನಿಯಂತ್ರಣ ಔಷಧಿ ಸಿಂಪಡಿಸುವ ಬಗ್ಗೆ ಕ್ರಮವನ್ನು ತ್ವರಿತವಾಗಿ ಕೈಗೊಳ್ಳು ಬಗ್ಗೆ ತಿಳಿಸಲಾಯಿತು.
7. ಮಾನ್ಯ ನೋಡಲ್ ಅಧಿಕಾರಿಯವರು ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕೆಂದು ತಿಳಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ನಿರ್ಣಯ:-**

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಮುಂದಿನ ಸಭೆಯೊಳಗಾಗಿ ಶೀಘ್ರವಾಗಿ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತ್ತು.

ಕಾರ್ಯದರ್ಶಿ
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ. 120
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner